# ಬಂಧುತ್ವ ಅನುಭವದ ಧಾರೆ ನಟನೆ



◆ ಕೆಂಡಸಂಪಿಗೆ ಎಂದ ತಕ್ಷಣ ನಿಮಗೆ ಏನೆನಿಸುತ್ತದೆ?

ಅದೊಂದು ಹೂವು ಎನ್ನುವುದನ್ನು ಬಿಟ್ಟರೆ ಬೇರೆ ಹೇಳುವಂತಹ ಅನುಭವ ನನಗೆ ಆಗಿಲ್ಲ. ಈಗ ನನ್ನ ವೃತ್ತಿ ಬದುಕು ಬದಲಿಸಿದ ಮತ್ತೊಂದು ಅವಕಾಶ ಎಂದೆನಿಸುತ್ತದೆ. ಎರಡು ವರ್ಷದಿಂದ ನಟನೆಯಿಂದ ದೂರ ಉಳಿದಿದ್ದೆ. ಅತ್ಯುತ್ತಮ ಚಾಲೆಂಜಿಂಗ್ ಪಾತ್ರವನ್ನು ಇದರಲ್ಲಿ ನಿರ್ವಹಿಸುತ್ತಿದ್ದೇನೆ ಎಂದು ಭಾವಿಸಿದ್ದೇನೆ.

◆ ನಟನೆಯಿಂದ ದೂರ ಹೋಗಿದ್ದು ಏಕೆ?

ಏಕೆ ಹಾಗಾಯ್ತು ಅಂತ ಗೊತ್ತಿಲ್ಲ. ಗ್ಯಾಪ್ ತೆಗೆದುಕೊಳ್ಳಬೇಕು ಅಂತ ನಾನೇನೂ ಯೋಚನೆ ಮಾಡಿರಲಿಲ್ಲ. ಪಾತ್ರವನ್ನು ಪಡೆಯಲು ಪ್ರಯತ್ನ ಮಾಡಲಿಲ್ಲ. ಅವಕಾಶವೂ ಹುಡುಕಿಕೊಂಡು ಬರಲಿಲ್ಲ. ಅಭಿನಯ ಹೊರತು ಬೇರೆ ಏನಾದರೂ ಮಾಡೋಣ ಎಂದು ಯೋಚಿಸಿದೆ. ಆದರೆ ಏನೂ ಮಾಡುವ ಯತ್ನ ಮಾಡಲಿಲ್ಲ. ಮರಳಿ ನಟನೆ ಆರಂಭಿಸುವ ಮನಸು ಮಾಡಿದೆ. ಆ ಸಂದರ್ಭದಲ್ಲಿಯೇ ಈ ಅವಕಾಶ ಸಿಕ್ಕಿದೆ.

◆ 'ರಾಜೇಶ್' ಬೇರೆ ಪಾತ್ರದಂತೆ ಏಕಲ್ಲ?

ಭಾವುಕ ಪಾತ್ರಗಳು ವೈಯಕ್ತಿಕವಾಗಿ ನನಗೆ ಹೊಸ ಜಗತ್ತನ್ನು ಕಟ್ಟಿಕೊಡುತ್ತವೆ. ಏಕೆಂದರೆ ನನಗೆ ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಬಂಧು–ಬಳಗ ಎಂದು ಯಾರೂ ಇಲ್ಲ. ಅನಾಥಾಶ್ರಮದಲ್ಲಿ ಬೆಳೆದವನು ನಾನು. ಚಾಮರಾಜನಗರದಲ್ಲಿ ಜಿ.ಎಸ್. ಜಯದೇವ ಅವರ 'ದೀನಬಂಧು' ಆಶ್ರಮದಲ್ಲಿ ಇದ್ದೆ. ಆಶ್ರಮ ಬಿಟ್ಟು ಬೇರೆ ಏನೂ ನನಗೆ ಗೊತ್ತಿಲ್ಲ. ಏಳನೇ ವಯಸ್ಸಿನಲ್ಲಿ ನನ್ನ ಅಮ್ಮನ ಗೆಳತಿ ಅಲ್ಲಿಗೆ ಸೇರಿಸಿದ್ದರು. ನಂತರ ನನ್ನ ಅಮ್ಮನನ್ನು ನೋಡೇ ಇಲ್ಲ. ಅವರು ಮೈಸೂರಿನಲ್ಲೇ ಇದ್ದರಂತೆ. ತುಂಬ ದಿನಗಳ ಹಿಂದೆ ತೀರಿಹೋದರು ಎಂದು ಗೊತ್ತಾಯಿತು. ಹೀಗಿರುವ ನನಗೆ 'ಶನಿ'ಯಲ್ಲಿ ತಾಯಿ ಸಂಬಂಧವನ್ನು ತೋರಿಸಬೇಕಿತ್ತು. ತಾಯಿಯ ಪ್ರೀತಿ ಏನು ಅಂತಾನೆ ಗೊತ್ತಿರಲಿಲ್ಲ. ಇಲ್ಲಿ ಅಕ್ಕನ ಜೊತೆಗೆ ಜಗಳ, ಸಲುಗೆ, ಅಕ್ಕರೆಯನ್ನು ತೋರಿಸಬೇಕು. ಬಾಂಧವ್ಯದ ಭಾವ ಜಗತ್ತು ನನಗೆ ಹೊಸತು. ಈ ಯಾವ ಅನುಭವ ಗೊತ್ತಿರದ ನಾನು ನೋಡಿ ಅದನ್ನು ಪ್ರಕಟಿಸಬೇಕು. ಆ ಸವಾಲನ್ನು ಈ ಪಾತ್ರ ನೀಡಿದೆ. ಒಂದು ರೀತಿಯಲ್ಲಿ ನಟನೆ ಬಂಧುತ್ವದ ಅನುಭವ ಧಾರೆಯನ್ನು ಎರೆಯುತ್ತಿದೆ.



**ಸುನೀಲ್ ಆರ್.**
**ಕಲರ್ಸ್ ಕನ್ನಡ 'ಕೆಂಡಸಂಪಿಗೆ' ರಾಜೇಶ್**

◆ ಓದು ಹವ್ಯಾಸದ ಬಗ್ಗೆ ಹೇಳಿ.

ಶೈಕ್ಷಣಿಕವಾಗಿ ಓದುವ ಆಸಕ್ತಿ ಮೊದಲಿನಿಂದಲೂ ಇರಲಿಲ್ಲ. ಆದರೂ ಶಾಲೆಯಲ್ಲಿ ಒಳ್ಳೆಯ ಅಂಕಗಳನ್ನು ತೆಗೆಯುತ್ತಿದ್ದೆ. ಎಂದೂ ಓದಿನ ಬಗ್ಗೆ ದೊಡ್ಡ ಆಸೆ ಇಟ್ಟುಕೊಂಡಿರಲಿಲ್ಲ. ಪಿಯು ಮೊದಲ ವರ್ಷ ಇರುವಾಗಲೇ ಓದನ್ನು ಬಿಟ್ಟಿದ್ದೆ. ಅದೇ ಸಮಯಕ್ಕೆ ಶನಿಗೆ ಬಂದೆ. ಆಗ ನಟನೆ ಮಾಡಬೇಕು ಎಂದು ಯೋಚಿಸಿರಲಿಲ್ಲ. ಟೀವಿ ಸಿನಿಮಾಗಳ ಬಗ್ಗೆಯೂ ಗೊತ್ತಿರಲಿಲ್ಲ. ಅದಕ್ಕೂ ಮೊದಲು ವಾರಕ್ಕೆ ಒಮ್ಮೆ ಟೀವಿ ನೋಡುತ್ತಿದ್ದೆ. ಮೊಬೈಲ್ ಕೂಡ ಬಳಸಿರಲಿಲ್ಲ. ಡಾನ್ಸ್ ಇಷ್ಟ ಇದ್ದ ಕಾರಣಕ್ಕೆ ನನ್ನನ್ನು ಯಕ್ಷಗಾನ ಕಲಿಸಲು ಜಯದೇವಣ್ಣ ಉಡುಪಿಗೆ ಕಳಿಸಿದ್ದರು. ಅಲ್ಲಿಗೆ ಆಡಿಷನ್ ನಡೆಸಲು ಟೀವಿಯವರು ಬಂದಿದ್ದರು. ಆಡಿಷನ್ ಕೊಡಬೇಕು ಎಂದೂ ನಾನು ಮುಂದೆ ಹೋಗಿರಲಿಲ್ಲ. ನನ್ನನ್ನು ಗಮನಿಸಿದ ಟೀವಿ ತಂಡದ ಒಬ್ಬರು ನನ್ನನ್ನು ಕರೆದು ಒಂದು ಪುಟದ ಡೈಲಾಗ್ ಕೊಟ್ಟರು. ಅದು ತುಂಬ ಸುಲಭವಾಗಿತ್ತು. ಆರಾಮಾಗಿ ಮಾಡಿದೆ. ನನ್ನನ್ನು ಆಯ್ಕೆ ಮಾಡಿದರು.

◆ ಈಗ ಜೀವನ ಚೆನ್ನಾಗಿದೆ?

ಏನೇ ಮಾಡಿದರೂ ನನಗೊಬ್ಬನಿಗೆ ಮಾಡಿಕೊಳ್ಳಬೇಕು. ಬೇರೆ ಯಾವ ಜವಾಬ್ದಾರಿಯೂ ನನಗೆ ಇಲ್ಲ. ಚಿತ್ರೀಕರಣದ ಅನುಕೂಲಕ್ಕೆ ಬೆಂಗಳೂರಿನಲ್ಲಿ ರೂಮ್ ಮಾಡಿಕೊಂಡಿದ್ದೇನೆ. ಗೆಳೆಯನ ಜೊತೆ ಅಲ್ಲಿ ನೆಲೆಸಿದ್ದೇನೆ. ಅಭಿನಯವನ್ನೇ ವೃತ್ತಿಯಾಗಿ ಮಾಡಿಕೊಳ್ಳುತ್ತೇನೆ. ಪಾತ್ರ ಚೆನ್ನಾಗಿದೆ ಅನಿಸಿದರೆ ಯಾವುದೇ ಪಾತ್ರ ಸಿಕ್ಕರೂ ನಾನು ಮಾಡಲು ಸಿದ್ಧ. ಚಿಕ್ಕ ವಯಸ್ಸಿನಿಂದಲೂ ನನಗೆ ಡಾನ್ಸ್ ಅಂದರೆ ತುಂಬ ಇಷ್ಟ. ಹಾಡು ಯಾವುದೇ ಇದ್ದರೂ ಸ್ಟೆಪ್ ಹಾಕುತ್ತಿದ್ದೆ. ಆಶ್ರಮದಿಂದ ನಡೆಯುತ್ತಿದ್ದ ಬೀದಿ ನಾಟಕಗಳಲ್ಲಿ ಭಾಗಿಯಾಗುತ್ತಿದ್ದೆ.

◆ ಆಶ್ರಮದ ಜೊತೆ ನಿಮ್ಮ ನಂಟು ಈಗ ಹೇಗಿದೆ?

ಹಬ್ಬ–ಹುಣ್ಣಿಮೆ ಅಂತ ಇದ್ದರೆ ಹೋಗುವುದು ಅಲ್ಲಿಗೆ. ಬಿಡುವು ಸಿಕ್ಕಾಗ ಕೂಡ ಆಶ್ರಮಕ್ಕೆ ಹೋಗಬೇಕು ಎಂದು ಅನಿಸುತ್ತದೆ. ನಾನು ಮಾತ್ರ ಅಲ್ಲ. ಅಲ್ಲಿಂದ ಹೊರಬಂದ ಅನೇಕರು ಹಾಗೆ ಇದ್ದಾರೆ. ಮೈಸೂರು, ಮಂಗಳೂರು, ಬೆಂಗಳೂರಿನಲ್ಲಿ ಅನೇಕರು ಇದ್ದಾರೆ. ಅದರಲ್ಲಿ ಒಬ್ಬರು ಪತ್ರಕರ್ತ ಆಗಿದ್ದಾರೆ. ಕೆಲವರು ಡ್ರೈವರ್ ಆಗಿದ್ದಾರೆ. ಒಬ್ಬರು ಒಂದು ಕಂಪನಿ ನಡೆಸುತ್ತಾರೆ. ಒಬ್ಬ ಗಾಯಕನಾಗಿದ್ದಾನೆ. ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದಾರೆ. ಇನ್ನೂ ಬೇರೆ ಬೇರೆ ಕೆಲಸ ಮಾಡುವವರು ಇದ್ದಾರೆ. ನಾವು ಹಬ್ಬ ಹರಿದಿನಗಳ ಆಚರಣೆಯನ್ನು ಆಶ್ರಮದಲ್ಲೇ ಮಾಡುತ್ತೇವೆ. ಈಗಲೂ ಅದರ ಸಂಪರ್ಕದಲ್ಲಿ ಇದ್ದೇನೆ. ಶೂಟಿಂಗ್ ಇಲ್ಲ ಅಂದ್ರು ನಾನೂ ಹಿರಿಯ ಕಲಾವಿದರ ಅಭಿನಯವನ್ನು ನೋಡುವ ಆಸೆಯಿಂದ ಕೂರುತ್ತೇನೆ. ಒಟ್ಟಾರೆ ನಾನು ಇಲ್ಲಿ ಖುಷಿಯಾಗಿ ಇದ್ದೇನೆ.

■ **ರಾಘವೇಂದ್ರ ಕೆ.**